**ಓ ಎಸ್ ನಂಃ 60/2015**
**ಡಿ ಡಬ್ಲ್ಯೂ ಃ 1**

**ದಿಃ 13.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಜಿ ಜಿ ಬಿ ಹೆಚ್ ವಕೀಲರಿಂದಃ**

ವಾದಿಗಳು ಹಾಕಿರುವ ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ನಾನು 4 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾವು ಈ ದಾವೆಯಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು ಅದು ಪ್ರತಿವಾದ ಪತ್ರವಾಗಿದ್ದು ಸದರಿ ದಾಖಲಾತಿಯನ್ನು ಸಾಕ್ಷಿಯ ಒಪ್ಪಿಗೆಯ ಮೇರೆಗೆ ನಿಪಿ 10 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 10 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ 10 ರ ಕೊನೆಯ ಪುಟದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 10 (ಎ) ಎಂದು ಗುರುತಿಸಲಾಯಿತು. ನನ್ನನ್ನು ಊರಿನಲ್ಲಿ ಮಾರಣ್ಣ ಮತ್ತು ನಾಗರಾಜು ಎಂಬ ಹೆಸರಿನಿಂದ ಕರೆಯುತ್ತಾರೆ. ಸದರಿ ವಿಚಾರವನ್ನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ತಾವು ತಮ್ಮ ಲಿಖಿತ ಹೇಳಿಕೆಗೆ ಸತ್ಯಾಪನಾ ಪ್ರಮಾಣ ಪತ್ರವನ್ನು ಆಂಗ್ಲ ಭಾಷೆಯಲ್ಲಿ ನಮೂದು ಮಾಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಲಿಖಿತ ಹೇಳಿಕೆಯ ಸತ್ಯಾಪನಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸತ್ಯಾಪನಾ ಪ್ರಮಾಣ ಪತ್ರದಲ್ಲಿ ನನ್ನ ವಕೀಲರು ಸಹಿಯನ್ನು ನನ್ನ ಕಡೆಯಿಂದ ಹಾಕಿಸಿರುತ್ತಾರೆ. ದಾವಾ ಸ್ವತ್ತುಗಳ ಬಗ್ಗೆ ತಮಗೆ ಖುದ್ದು ಮಾಹಿತಿ ಇಲ್ಲದಿದ್ದರೂ ಸಹ ತಮ್ಮ ವಕೀಲರ ಮಾತನ್ನು ಕೇಳಿ ತಮ್ಮ ಲಿಖಿತ ಹೇಳಿಕೆಯ ಸತ್ಯಾಪನಾ ಪ್ರಮಾಣ ಪತ್ರಕ್ಕೆ ಸಹಿಯನ್ನು ಹಾಕಿದ್ದೀರಿ ಎಂದರೆ ಸರಿ. ಸತ್ಯಾಪನಾ ಪ್ರಮಾಣ ಪತ್ರಕ್ಕೆ ನಾನು ನಮ್ಮ ವಕೀಲರ ಮುಂದೆ ಸಹಿಯನ್ನು ಮಾಡಿರುತ್ತೇನೆ.

ದಾವಾ ಸ್ವತ್ತುಗಳು ಮುಲತಃ ಕೆಂಪಯ್ಯನವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮೂಲತಃ ಕೆಂಪನರಸಯ್ಯನವರಿಗೆ ಸೇರಿದ ಸ್ವತ್ತುಗಳು. ಕೆಂಪನರಸಯ್ಯನವರು ಮರಣ ಹೊಂದುವ ತನಕ ನನ್ನ ಮತ್ತು 1 ನೇ ಪ್ರತಿವಾದಿ ಜೊತೆಯಲ್ಲಿ ವಾಸವಾಗಿದ್ದರು. ಕೆಂಪನರಸಯ್ಯನವರ ಆಗುಹೋಗುಗಳನ್ನು ತಾವು ಮತ್ತು 1ನೇ ಪ್ರತಿವಾದಿ ಮಾತ್ರ ನೋಡಿಕೊಳ್ಳುತ್ತಿದ್ದಿರಿ ಎಂದರೆ ಸರಿ. ಕೆಂಪನರಸಯ್ಯನವರಿಗೆ ಇಬ್ಬರು ಹೆಂಡತಿಯರು ಇದ್ದರು

**ಓ ಎಸ್ ನಂಃ 60/2015**
**ಡಿ ಡಬ್ಲ್ಯೂ ಃ 1**

ಎಂದರೆ ನನಗೆ ಗೊತ್ತಿಲ್ಲ. ನಾನು 2 ನೇ ಹುಚ್ಚಮ್ಮನ ಮಗ. ನನ್ನ ತಂದೆ ಕೆಂಪನರಸಯ್ಯನವರು 7 ನೇ ವರೆಗೆ ವ್ಯಾಸಂಗ ಮಾಡಿರುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ ವ್ಯವಸಾಯ ವೃತ್ತಿಯನ್ನು ಹಾಗೂ ವ್ಯಾಪಾರವನ್ನು ಮಾಡುತ್ತಿದ್ದರು. ದಿಃ 20.04.1942 ರ ಕ್ರಯ ಪತ್ರದ ಮೂಲ ಪ್ರತಿಯನ್ನು (ನಿಡಿ 1) ಹಾಜರುಪಡಿಸಿದ್ದೀರಿ ಎಂದರೆ ಸರಿ. ನಿಡಿ 1 ಕ್ರಯ ಪತ್ರದಲ್ಲಿರುವ ಸ್ವತ್ತನ್ನು ನಮ್ಮ ತಂದೆಯವರು ಹರಾಜಿನಲ್ಲಿ ಕೊಂಡುಕೊಂಡಿರುತ್ತಾರೆ. ನಮ್ಮ ತಂದೆಯವರು ಕನ್ನಡ ಭಾಷೆಯಲ್ಲಿ ಮಾತ್ರ ರುಜು ಮಾಡುತ್ತಿದ್ದರು. ನಿಡಿ 1 ರ ಕ್ರಯ ಪತ್ರದ ತಪಶೀಲು ಸ್ವತ್ತಿನಲ್ಲಿ ನಮೂದು ಮಾಡಿರುವ ಸ್ವತ್ತುಗಳು ದಾವಾ ಷೆಡ್ಯೂಲ್ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ನಿಡಿ 1 ರ ಕ್ರಯ ಪತ್ರದಲ್ಲಿ ನಮೂದಾಗಿರುವ ಷೆಡ್ಯೂಲ್ ಸ್ವತ್ತಿಗೆ ಚಕ್ಕುಬಂದಿ ನಮೂದಾಗಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ನಿಡಿ 1 ರ ಕ್ರಯ ಪತ್ರದಲ್ಲಿ ತಮ್ಮ ತಂದೆಯವರ ಸಹಿ ಇಲ್ಲ ಎಂದರೆ ಸರಿಯಲ್ಲ. ನಿಡಿ 1 ರ ಕ್ರಯ ಪತ್ರದಲ್ಲಿ ನಮೂದು ಮಾಡಿರುವ ಸ್ವತ್ತನ್ನು ಎಷ್ಟು ಹಣಕ್ಕೆ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**